**ಇಂದು ದಿನಾಂಕ 08.12.2025 ರಂದು ಪಿಡಬ್ಲ್ಯೂ -3 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿ ವಾರಸ್ಸುದಾರರ ಪರ ವಕೀಲರಿಂದಃ**

**2.** ದಾವೆಯನ್ನು ನನ್ನ ತಾಯಿಗೆ ಭಾಗ ಬರಬೇಕೆಂದು ಹಾಕಿದ್ದೇನೆ. ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೆ ಕೊಟ್ಟಿದ್ದೇನೆ. ಅದರ ವಿಚಾರಗಳನ್ನು ಓದಿ ತಿಳಿದುಕೊಂಡಿದ್ದೇನೆ. ನನ್ನ ಚಿಕ್ಕಮ್ಮನಿಗೆ ಮದುವೆಯನ್ನು ನನ್ನ ತಂದೆ ವೆಂಕಟರಮಣಪ್ಪ ಮತ್ತು ಅವರ ಅಣ್ಣ ನಂಜುಂಡಪ್ಪ ಮಾಡಿದ್ದಾರೆ. ನನ್ನ ತಾಯಿಗೆ ಮದುವೆಯನ್ನು ಅವರ ಮಾವ ಮಾಡಿಕೊಟ್ಟರು. ಅವರ ಇಬ್ಬರು ಮದುವೆಯನ್ನು 1 ನೇ ಪ್ರತಿವಾದಿಯೇ ಮಾಡಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಿನಾಂಕಃ 24.10.1989 ರಲ್ಲಿ ಮೃತರಾಗಿದ್ದಾರೆ ಎಂದರೆ ದಿನಾಂಕ ನೆನಪಿಲ್ಲ ಎನ್ನುತ್ತಾರೆ. ನನ್ನ ತಾಯಿ ಮತ್ತು ನನ್ನ ಚಿಕ್ಕಮ್ಮ ಚಿಕ್ಕಬಳ್ಳಾಪುರದಲ್ಲಿ ವಾಸವಿದ್ದಾರೆ ಎಂದರ ಸರಿಯಲ್ಲ. ನನ್ನ ಚಿಕ್ಕಮ್ಮ ಅವರ ಗಂಡನ ಮನೆಯಲ್ಲಿ ಇದ್ದಾರೆ ನನ್ನ ತಾಯಿ ಅವರ ಗಂಡನ ಮನೆಯಲ್ಲಿ ಇದ್ದಾರೆ. ಐ.ಹೆಚ್.ಆರ್.ನಂ.6/1990-91 ಅದನ್ನು ಕೊಟ್ಟಿದ್ದೇನೆ. ಆ ದಾಖಲೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅದರಲ್ಲಿ ನನ್ನ ಅಜ್ಜಿ ನರಸಿಂಹಯ್ಯನವರ ಹೆಸರಿಗೆ ಖಾತೆ ಮಾಡಿಸಲು ಹೇಳಿಕೆ ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ತಾತ ಮೃತರಾದ ನಂತರ ಮನೆಯ ನಿರ್ವಹಣೆಯನ್ನು ನನ್ನ ಅಜ್ಜಿ ಹಾಲು ಮಾರಿ ಮಾಡುತ್ತಿದ್ದರು. ಅವರ ಜೀವನ ನಿರ್ವಹಣೆಗೆ ಆ ಆದಾಯ ಸಾಕಾಗುತ್ತಿತ್ತು ಎಂದರೆ ನಿಜ. ಅದರಿಂದ ಮದುವೆ ಮಾಡಲು ಆಗುತ್ತಿರಲಿಲ್ಲ ಎಂದರೆ ನಿಜ. ಆದ ಕಾರಣ ನನ್ನ ಮಾವ 1 ನೇ ಪ್ರತಿವಾದಿ ಸಾಲ ಮಾಡಿ ಮನೆಯ ನಿರ್ವಹಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸಾಲ ತೀರಿಸಲು ಮತ್ತು ನನ್ನ ತಾಯಿ ಮತ್ತು ನನ್ನ ಚಿಕ್ಕಮ್ಮನಿಗೆ ಮದುವೆ ಮಾಡಲು ದಾವಾ ಆಸ್ತಿಯನ್ನು ಮಾರಾಟ ಮಾಡಿ ನನ್ನ ತಾಯಿ ಮತ್ತು ನನ್ನ ಚಿಕ್ಕಮ್ಮನಿಗೆ ಆದಾಯ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

**3.** ದಾವಾ ಆಸ್ತಿಯನ್ನು ಬಿಟ್ಟು ನಮಗೆ ಬೇರೆ ಜಮೀನು ಇಲ್ಲ. ಒಂದು ಹಳೆ ಮನೆ ಇರಬಹುದು. ಸದರಿ ಮನೆ ನನ್ನ ತಾತನಿಗೆ ಸೇರಿದ್ದು. ಈ ದಾವೆಯಲ್ಲಿ ಸೇರಿಸಿಲ್ಲ. ದಾವಾ ಆಸ್ತಿಯನ್ನು ನೋಡಲು ಕೊನೆಯದಾಗಿ ದಸರಾ ಸಮಯದಲ್ಲಿ ಹೋಗಿದ್ದೆನು. ದಾವಾ ಆಸ್ತಿ ಖಾಲಿ ಇದೆ. ಅದರಲ್ಲಿ ಹುಲ್ಲು ಬೆಳೆದುಕೊಂಡಿದೆ. ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಕರಾಬು, ಪಶ್ಚಿಮಕ್ಕೆ ಮುನಿವೆಂಕಟಪ್ಪ, ಉತ್ತರಕ್ಕೆ ಚಿನ್ನಪ್ಪ ಮತ್ತು ದಕ್ಷಿಣಕ್ಕೆ ವೆಂಕಟಪ್ಪ. ಅದರ

ಸುತ್ತ-ಮುತ್ತ ಬಿಲ್ಡಿಂಗ್‌ಗಳು ಇವೆ. ರಂಗಸ್ವಾಮಿ ಕ್ಯಾಂಪಸ್ ಬಗ್ಗೆ ನಾನು ಕೇಳಿಲ್ಲ. ನನ್ನ ಮಾವ 1994 ರಲ್ಲಿ ಮಾರಾಟ ಮಾಡಿದ್ದಾರೆ. ಆ ದಾಖಲೆಯನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ದಾವಾ ಆಸ್ತಿ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಯಾವ ಉದ್ದೇಶಕ್ಕಾಗಿ ಮಾರಾಟ ಮಾಡಿದ್ದಾರೆ ಎಂದು ಗೊತ್ತಿಲ್ಲ. ಎಂ. ವೆಂಕಟಸುಬ್ಬಯ್ಯ ದಾವಾ ಆಸ್ತಿಯನ್ನು ಖರೀದಿ ಮಾಡಿರುವವರು. ದಾವಾ ಆಸ್ತಿಯಲ್ಲಿ ಅವರು ಸ್ವಾಧೀನದಲ್ಲಿ ಇಲ್ಲ. ದಾವಾ ಆಸ್ತಿಯಲ್ಲಿ ಲಾರಿಯವರಿಂದ ಕಲ್ಲುಗಳನ್ನು ಹಾಕಿಸಿಕೊಂಡು ಬಾಡಿಗೆಯನ್ನು ನಾವು ಪಡೆಯುತ್ತಿದ್ದೇವೆ. ದಾವಾ ಆಸ್ತಿ ಪರಿವರ್ತನೆಯಾಗಿದೆ ಎಂದರೆ ನಿಜ. ದಾವಾ ಆಸ್ತಿ ಕ್ರಯಪತ್ರದ ಮೂಲಕ ಬಂದಿದೆ ಎಂದು ಹೇಳಿರುವುದಕ್ಕೆ ದಾಖಲೆ ಹಾಜರು ಮಾಡಿದ್ದೇನೆ. ದಾವಾ ಆಸ್ತಿಯ ಬೆಲೆ ಜಾಸ್ತಿಯಾಗಿರುವ ಕಾರಣ ಖರೀದಿದಾರರಿಗೆ ಮೋಸ ಮಾಡುವ ಉದ್ದೇಶದಿಂದ ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜಿಗೆ ಹೇಳಿಕೆ ಕೊಡುವ ಸಮಯದಲ್ಲಿ ಗಮನದಲ್ಲಿ ಇದ್ದರು ತಕರಾರು ಹಾಕಿಲ್ಲ ಎಂದರೆ ಸರಿಯಲ್ಲ. ನಿವೇಶನ ಆಗಿದೆ ಎಂದು ನಿಪಿ-13 ರಲ್ಲಿ ಇದೆ ಎಂದರೆ ನಿವೇಶನ ಆಗಿಲ್ಲ ಎನ್ನುತ್ತಾರೆ. ದಾವಾ ಆಸ್ತಿ ರಾಷ್ಟ್ರೀಯ ಹೆದ್ದಾರಿಯಿಂದ ಸ್ವಲ್ಪ ದೂರ ಇದೆ. ದಾವಾ ಆಸ್ತಿಯ 1 ಗುಂಟೆಗೆ ಬೆಲೆ ಎಷ್ಟು ಎಂದರೆ ಗೊತ್ತಿಲ್ಲ. ಮೃತ 2 ನೇ ಪತಿವಾದಿಗೆ ಖಾತೆ ಆಗುವ ಸಮಯದಲ್ಲಿ ವಾದಿಯರು ತಕರಾರು ಕೊಟ್ಟಿದ್ದರ ಎಂದರೆ ಆಗ ಆ ವಿಚಾರ ಗೊತ್ತಿರಲಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗೆ ಕಂದಾಯವನ್ನು ಕಟ್ಟಿದ್ದೀರ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯ ಬಗ್ಗೆ ನನಗೆ ಏನೂ ಗೊತ್ತಿಲ್ಲದಿದ್ದರೂ ವಾದಿಯರು ಬಂದರೆ ಸತ್ಯ ತಿಳಿಯುತ್ತದೆ ಎಂದು ನಾನು ಬಂದು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಬರಬೇಕಾದ ಭಾಗವನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**